ಓ.ಎಸ್.ನಂ.148/2021
ಪಿ.ಡಬ್ಲ್ಯೂ-1

ದಿನಾಂಕಃ 09-09-2024 ರಂದು ಪಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.
**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ.ಡಿ.ಟಿ.ಬಿ ವಕೀಲರಿಂದ:**

1. ನಾನು ಹಾಜರ ಪಡಿಸಿರುವ ಫೋಟೊಗಳನ್ನು ನನ್ನ ಮಗ ಮೋಬೈಲನಿಂದ ತೆಗೆದಿರುತ್ತಾನೆ. ದಾವಾ ಜಮೀನಿನ ಪಶ್ಚಿಮ ದಿಕ್ಕಿಗೆ ನನ್ನ ಅಣ್ಣ ತಮ್ಮಂದಿರ ಜಮೀನುಗಳು ಇವೆ. ಗುರಪ್ಪ ಕಡಪಟ್ಟಿ ನನ್ನ ತಮ್ಮ ಇರುತ್ತಾನೆ. ಸದರಿ ಗುರಪ್ಪ ಕಡಪಟ್ಟಿ ಇವರ ಜಮೀನು ದಾವಾ ಜಮೀನಿನ ಉತ್ತರ ದಿಕ್ಕಿನಲ್ಲಿ ಬರುತ್ತದೆ. ನನ್ನ ತಂದೆಯ ಸಮಾಧಿ ಸದರಿ ಗುರಪ್ಪ ಕಡಪಟ್ಟಿ ಇವರ ಜಮೀನಲ್ಲಿ ಇರುತ್ತದೆ ಎಂದರೆ ಸರಿ. ನಾನು ಹಾಜರ ಪಡಿಸಿರುವ ಫೋಟೊಗಳು ದಾವಾ ಜಮೀನಿಗೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ. ಸದರಿ ಫೋಟೊಗಳಲ್ಲಿ ಕಾಣುತ್ತಿರುವ ಜಮೀನುಗಳು ನನ್ನ ಅಣ್ಣ-ತಮ್ಮಂದಿರ ಜಮೀನುಗಳಾಗಿರುತ್ತವೆ ಎಂದರೆ ಸರಿಯಲ್ಲ. 10 ದಿನಗಳ ಹಿಂದೆ ಪೋಲಿಸರು ನನ್ನ ತಾಯಿಯ ಸಮಾಧಿಯ ಬಳಿ ಬಂದು ಪಂಚನಾಮೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸರಿ. ಪ್ರಸ್ತುತ ದಾವೆಗೆ ಅನೂಕೂಲವಾಗಲೆಂದು ನನ್ನ ತಾಯಿಯ ಸಮಾಧಿ ದಾವಾ ಜಮೀನಿನಲ್ಲಿ ಇದೆ ಎಂದು ತೋರಿಸಲು ಸುಳ್ಳು ಸಾಕ್ಷ್ಯ ಸೃಷ್ಟಿ ಮಾಡಿರುತ್ತೇನೆ ಎಂದು ಸರಿಯಲ್ಲ. ಸದರಿ ಸಮಾಧಿಯನ್ನು ತೆಗೆಸುವಂತೆ ಪ್ರತಿವಾದಿಯರು ಪೋಲಿಸರಿಗೆ ದೂರು ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗು ಮತ್ತು ನಾನು ಹಾಜರ ಪಡಿಸಿರುವ ಫೋಟೊಗಳಿಗು ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ